ಬಂದೀತು! ಇಂತಹ ರೂಪು! ಇಂತಹ ಸದಸದ್ವಿಚಾರ ವಿವೇಕವನ್ನು ತೋರ್ಪಡಿಸುವ ಮುಖ! ಇವುಗಳು ಹೇಮಲತೆಗಲ್ಲದೆ ಮತ್ತಾರಿಗುಂಟು? ಆರಿಗೂ ಇಲ್ಲ. ಪ್ರಸಂಗವು ಮುಗಿಯುವುದರೊಳಗಾಗಿ ನೂರಾರು ಮಂದಿ ತಮ್ಮ ಹೃದಯಗಳನ್ನು ದೇವರಿಗೆ ಒಪ್ಪಿಸಿದ್ದರು...' (ಪುಟ 74)

ಕಾದಂಬರಿಯಲ್ಲಿ ಬಳಸಿರುವ ಹೆಸರುಗಳೂ ಕ್ರೈಸ್ತ ಮತದ ಮತ್ತು ಮತಾವಲಂಬಿಗಳ ಶ್ರೇಷ್ಠತೆಯನ್ನು ಒತ್ತಿಹೇಳುವಂತಿವೆ. ಗುಡ್‌ವಿಲ್ ಮಿಸಿ ಮತ್ತು ವೇದಮಿತ್ರಯ್ಯ ಎನ್ನುವ ಹೆಸರುಗಳನ್ನು ಗಮನಿಸಬಹುದು. (ಮ್ಯೋಗ್ಲಿಂಗರ 'ಈರಾರು ಪತ್ರಿಕೆ'ಯಲ್ಲಿ ಮತಾಂತರಗೊಂಡ ನಾಯಕ ಮೊದಲಿದ್ದ ಊರು 'ಕೃಷ್ಣಪುರ', ಕ್ರೈಸ್ತ ಮಿಷನರಿಗಳಿರುವ ಮತ್ತು ಅವನು ಮುಂದೆ ರಕ್ಷಣೆ ಪಡೆದ ಊರು 'ದೇವಪುರ' ಎನ್ನುವುದನ್ನೂ ನೆನಪಿಸಿಕೊಳ್ಳಬಹುದು).

ಕಾದಂಬರಿಯಲ್ಲಿ ಹಿಂದೂ ಮತ್ತು ಕ್ರಿಶ್ಚಿಯನ್ ಧರ್ಮಗಳನ್ನು ಪರಸ್ಪರ ಎದುರಾಗಿಸಿ, ಚರ್ಚಿಸಿ ಹಿಂದೂ ಧರ್ಮವು ತಿರಸ್ಕಾರಯೋಗ್ಯ ಎಂದು ಒಂದು ಸಂಕಥನವನ್ನು ಕಟ್ಟಲಾಗಿದೆ. ಆದರೆ, ಆ ಕಾಲದ ವಾಸ್ತವದ ಕೆಲವು ವಿವರಗಳು ಈ ಸಂಕಥನವನ್ನು ಒಳಗಿನಿಂದಲೇ ಶಿಥಿಲಗೊಳಿಸುತ್ತವೆ. ಉದಾಹರಣೆಗೆ, ಘನ ವೇದಮಿತ್ರೈಯ ಪ್ರಭಾಕರನಿಗೆ ತಮ್ಮ ಜತೆಗೆ ಉಳಿದುಕೊಳ್ಳಬಹುದು ಎನ್ನುತ್ತಾರೆ. ಅವನು ಕ್ರೈಸ್ತ ಮನೆಯಲ್ಲಿ ತಾನು ಉಳಿದುಕೊಳ್ಳುವುದು ಹೇಗೆ ಎಂದು ಯೋಚಿಸುತ್ತಿದ್ದಾಗ, 'ವೇದಮಿತ್ರೈಯನವರು ಅವನ ಭಾವವನ್ನು ತಿಳಿದು – 'ಸೋದರರೇ, ನಿಮಗೆ ಅಷ್ಟು ಸರಿಬೀಳದಿದ್ದರೆ ನಮ್ಮ ಮನೆಯ ಬಳಿ ಇರುವ ಒಬ್ಬ ಬ್ರಾಹ್ಮಣ ಗೃಹಸ್ಥರ ಮನೆಯಲ್ಲಿನ ಕೋಣೆಯನ್ನು ತೆರೆವು ಮಾಡಿಸಿಕೊಡುತ್ತೇನೆ. ನೀವು ಅಲ್ಲಿ ಉಳಿದುಕೊಂಡರೆ ಸಕಲವೂ ಅನುಕೂಲವಾಗುವುದು' ಎಂದರು' (ಪುಟ 28). ನಂತರ ಪ್ರಭಾಕರನಿಗೆ ಉಳಿದುಕೊಳ್ಳುವ ವ್ಯವಸ್ಥೆಯನ್ನು ಸಮೀಪದ ಬ್ರಾಹ್ಮಣರ ಮನೆಯಲ್ಲಿ ಮಾಡುತ್ತಾರೆ.

ಅವನ ಊಟಕ್ಕೆ ಅಲ್ಲಿಯೇ ಒಂದು ಬ್ರಾಹ್ಮಣ ಭೋಜನಗೃಹದಲ್ಲಿ ವ್ಯವಸ್ಥೆಯಾಗುತ್ತದೆ. ಪ್ರಭಾಕರನು ಅಲ್ಲಿಯೂ ಬ್ರಾಹ್ಮಣರ ಒಳಪಂಗಡಗಳ ಕುರಿತು ಜಾಗೃತನಾಗಿರುವುದನ್ನು ಕಾದಂಬರಿಕಾರ ವರ್ಣಿಸುತ್ತಾರೆ. ಭೋಜನಗೃಹದ ಅಧಿಕಾರಿಯು, 'ಅಡಿಗೆ ಸಿದ್ಧವಾಗಿದೆ. ಭೋಜನಕ್ಕೆ ದಯಮಾಡಬೇಕು' ಎಂದು ಕರೆದಾಗ, ಪ್ರಭಾಕರನು ಸ್ವಲ್ಪ ಹೊತ್ತು ಸುಮ್ಮನಿದ್ದನು. ಅನಂತರ 'ನೀವಾವ ಬಗೆಯವರು ಸ್ವಾಮಿ?' ಎಂದನು.

'ನಾವು ವೈಷ್ಣವರು, ಮುದ್ರೆ ಹಾಕುತ್ತಾರಲ್ಲಾ, ಅಂತಹವರು.'

ಇನ್ನೊಂದು ಉದಾಹರಣೆಯೆಂದರೆ, ಪ್ರಭಾಕರ ಮತ್ತು ಹೇಮಲತೆಯ ವಿವಾಹ ಪ್ರಸ್ತಾಪವನ್ನು ಗುಡ್‌ವಿಲ್ ಮಾಡುವಾಗ, ಇಬ್ಬರೂ ಇನ್ನೊಬ್ಬರು ಬ್ರಾಹ್ಮಣರೇ ಎಂದು ತಿಳಿಯಲು ಬಯಸುತ್ತಾರೆ. ಅವರ ಮದುವೆಯನ್ನು ಬ್ರಾಹ್ಮಣ ಪುರೋಹಿತರು ನಡೆಸುವುದು ಮತ್ತೊಂದು ಉದಾಹರಣೆಯಾಗಿದೆ. 'ಜಾತಿಯ ಹಳವಂಡಗಳನ್ನು ಮೀರುವುದು ಕಷ್ಟ ಎಂದು ಕಾದಂಬರಿ ಸೂಚಿಸುತ್ತದೆ' ಎಂದು ಜಯಶ್ರೀನಿವಾಸರಾವ್ (ತಮ್ಮ ಇಂಗ್ಲಿಷ್ ಲೇಖನದಲ್ಲಿ) ಸೂಚಿಸಿದ್ದಾರೆ. ಅದನ್ನು ಹಾಗೆ ಪರಿಗಣಿಸಿದರೆ ಕಾದಂಬರಿಯು ಒಂದು ವಿಶಿಷ್ಟ ಸಾಂಸ್ಕೃತಿಕ ಪಠ್ಯವಾಗಿ ಪ್ರಸ್ತುತವಾಗುತ್ತದೆ.

ಸೂಕ್ಷ್ಮವಾಗಿ ನಮ್ಮ ದೇಶದ ಜಾತಿ ವ್ಯವಸ್ಥೆಯ ಒಳಸುಳಿಗಳನ್ನು ಕಾಣಿಸಿಕೊಡುವುದು ಮತ್ತು ಜಾತಿಯನ್ನು ಮೀರುವುದು ಸುಲಭವಲ್ಲ ಎನ್ನುವುದನ್ನು ಸೂಚಿಸುವುದೇ ಲೇಖಕರ ಉದ್ದೇಶ ಅನಿಸುತ್ತದೆ.

ಕಾದಂಬರಿಯ ಕೊನೆಯಲ್ಲಿ ಪ್ರಭಾಕರ ತನ್ನ ವಕೀಲಿ ವೃತ್ತಿಗೆ ತೊಂದರೆ ಆದೀತೆಂಬ ದೂರಾಲೋಚನೆಯಿಂದಲೂ ('ಸಾಂಘಿಕ ಸಂಸರ್ಗಗಳಿಗೆ ಕೊರತೆಯುಂಟಾಗುವುದೆಂಬ ಭೀತಿಯಿಂದ') ಮತಾಂತರ ಪ್ರಕ್ರಿಯೆಯನ್ನು ಮುಂದೂಡುತ್ತಿರುವನೆಂಬ ಸೂಚನೆಯೂ ಇದೆ. ಕಾದಂಬರಿಕಾರರು ವಾಸ್ತವದ ಗಟ್ಟಿನೆಲದ ಮೇಲೆ ನಿಂತು ತಮ್ಮ ಕಾಲದ ಪರಿವರ್ತನೆಗಳನ್ನು ದಾಖಲಿಸಿರುವುದಕ್ಕೆ ಇದೊಂದು ಉದಾಹರಣೆಯಾಗಿದೆ. ಒಟ್ಟು ಕಾದಂಬರಿಗೆ ಪ್ರೊಪಗಾಂಡಿಸ್ಟ್ ಆಶಯವಿದ್ದರೂ ಕಾದಂಬರಿಯಲ್ಲಿರುವ ಸೂಕ್ಷ್ಮ ಬಿರುಕುಗಳು ಇದನ್ನು ಅಧ್ಯಯನಯೋಗ್ಯ ಕಾದಂಬರಿಯನ್ನಾಗಿಸಿವೆ. ಸಾಹಿತ್ಯ ಚರಿತ್ರೆಯಲ್ಲಿಯೂ ಇದಕ್ಕೆ ಐತಿಹಾಸಿಕ ಮಹತ್ವವಿದೆ.

●